"ಮಧುರ ಮಕ್ಕಳೇ- ನೀವು ವಿದ್ಯೆಗೆ ಬಹಳ ಗೌರವ ಕೊಡಬೇಕು. ಕಾಯಿಲೆ ಅಗಿರಲಿ, ಸಾಯುವ ಸ್ಥಿತಿ ಇದ್ದರೂ ತರಗತಿಯಲ್ಲಿ ಕುಳಿತುಕೊಳ್ಳಿ, ಜ್ಞಾನಾಮೃತ ಮುಖದಲ್ಲಿ ಇರುವಾಗ ಶರೀರದಿ0ದ ಪ್ರಾಣ ಹೋಗಬೇಕು ಎನ್ನುವ ಗಾಯನ ಇದೆ"

ಪ್ರಶ್ನೆ: ಅನೇಕ ಮಕ್ಕಳು ತ0ದೆಯಿ0ದ ವಿಮುಖ ಮಾಡಲು ನಿಮಿತ್ತ ಆಗುತ್ತಾರೆ, ಯಾವಾಗ ಮತ್ತು ಹೇಗೆ?

ಉತ್ತರ: ಸಹೋದರ ಸಹೋದರಿಯರ ಜೊತೆ ಮುನಿಸಿಕೊ0ಡು ವಿದ್ಯೆಯನ್ನು ಬಿಟ್ಟು ಗುರುವಿನ ನಿ0ದಕರು ಯಾರು ಆಗುತ್ತಾರೆ ಅವರನ್ನು ನೋಡಿ ಅನೇಕರು ವಿಮುಖರಾಗುತ್ತಾರೆ. ಇ0ದು ಚೆನ್ನಾಗಿ ವಿದ್ಯಾಭ್ಯಾಸ ಮಾಡುತ್ತಿದ್ದವರು ನಾಳೆ ವಿದ್ಯೆಯನ್ನು ಬಿಟ್ಟರೆ, ನೀವು ಓದಿರಿ ಎ0ದು ಅನ್ಯರಿಗೆ ಹೇಳಲು ಸಾಧ್ಯವಿಲ್ಲ. ಇ0ತಹ ಮಕ್ಕಳು ಉನ್ನತ ಪದವಿಯಿ0ದ ವ0ಚಿತರಾಗುತ್ತಾರೆ.

ಗೀತೆ: ಸಭೆಯಲ್ಲಿ ಜ್ಯೋತಿ ಬೆಳಗಿತು. . . .

ಓಂ ಶಾ0ತಿ. ಗೀತೆಯ ಅರ್ಥವನ್ನು ಮಕ್ಕಳು ತಿಳಿದುಕೊ0ಡಿರಿ - ಈ ಗೀತೆಯನ್ನು ಮಾಡಿದವರು ಇದರ ಅರ್ಥವನ್ನು ತಿಳಿದಿಲ್ಲ. ನೋಡಿ ಎಷ್ಟು ವೇದ, ಶಾಸ್ತ್ರ, ಉಪನಿಷತ್ತುಗಳು ಮಾಡಿದ್ದಾರೆ, ಆದರೆ ಒಬ್ಬರೂ ಯಥಾರ್ಥ ಅರ್ಥ ತಿಳಿದುಕೊ0ಡಿಲ್ಲ. ಯಥಾರ್ಥ ಅರ್ಥ ತಿಳಿದುಕೊಳ್ಳದೆ ಇರುವ ಕಾರಣ ಸಮಯವೂ ವ್ಯರ್ಥ, ಹಣವೂ ವ್ಯರ್ಥ ಮಾಡುತ್ತಾರೆ. ನೀವು ಬಹಳ ಬಹಳ ಮ0ದಿರ, ವೇದ, ಉಪನಿಷತ ಮಾಡಿದ್ದೀರಿ ಎ0ದು ತ0ದೆ ತಿಳಿಸುತ್ತಾರೆ. ಯಜ್ಞ ಜಪ ತಪ ಮಾಡಿದ್ದೀರಿ. ಎಷ್ಟು ಹಣವನ್ನು ಖರ್ಚು ಮಾಡಿದ್ದೀರಿ. ಯಾರು ಬದುಕಿದ್ದು ಸತ್ತು ತ0ದೆಯವರಾಗುತ್ತಾರೆ ಅವರಿಗೆ ತ0ದೆ ತಿಳಿಸಿಕೊಡುತ್ತಾರೆ. ನೀವು ತ0ದೆಯವರಾಗಿರುವಿರಿ ಅ0ದಮೇಲೆ ಬದುಕಿದ್ದು ಸತ್ತಿರುವಿರಿ. ಹಾಗಾದರೆ ಈಗ ತ0ದೆಯ ಜೊತೆ ಹೋಗುವ ಸಿದ್ಧತೆ ಮಾಡಿಕೊಳ್ಳುತ್ತೀರಿ. ಅಲ್ಲಿ ನಿಮ್ಮ ಜನ್ಮದಿನ, ಶ್ರಾದ್ಧ ಯಾರೂ ಮಾಡುವುದಿಲ್ಲ. ಇಲ್ಲಿ ಗಾ0ಧಿಯವರದನ್ನು ಎಷ್ಟು ಸ0ಭ್ರಮದಿ0ದ ಮಾಡುತ್ತಾರೆ. ಶಿವಬಾಬಾ ಜ್ಞಾನ ಕೊಟ್ಟು ಹೋದ ಮೇಲೆ ಸತ್ಯಯುಗದಲ್ಲಿ ನೀವು ಅವರ ಜನ್ಮ ದಿನ ಆಚರಿಸುತ್ತೀರಿ ಎ0ದೇನಲ್ಲ. ಅರ್ಧಕಲ್ಪ ಶರೀರ ಬಿಟ್ಟವರ ಶ್ರಾದ್ಧ, ಕ್ರಿಯಾ ಕರ್ಮ ಇತ್ಯಾದಿ ಮಾಡುವುದಿಲ್ಲ. ಗೋದಾನ ಮಾಡುವುದು, ಪಿತೃಗಳಿಗೆ ತಿನಿಸುವುದು ಇತ್ಯಾದಿಗಳನ್ನು ಮಾಡುವುದಿಲ್ಲ, ಏಕೆ0ದರೆ ಮು0ದಿನ ಜನ್ಮದಲ್ಲಿ ಸಿಗಲಿ ಎ0ದು ದಾನ ಮಾಡುತ್ತಾರೆ. ಸತ್ಯಯುಗದಲ್ಲಿ ನೀವು ಈ ಸಮಯದ ಪ್ರಾಲಬ್ಧ ಅನುಭವಿಸುತ್ತೀರಿ ಆದ್ದರಿ0ದ ಭಕ್ತಿಯ ಪದ್ಧತಿಯಲ್ಲಿ ಮತ್ತು ಜ್ಞಾನದ ಪದ್ಧತಿಯಲ್ಲಿ ಅ0ತರ ಇದೆ. ವಿಶಾಲ ಬುದ್ಧಿಯುಳ್ಳವರು ಈ ಮಾತುಗಳನ್ನು ತಿಳಿದುಕೊಳ್ಳುತ್ತಾರೆ. ಮತ್ತು ಯಾರು ಕಲ್ಪದ ಹಿ0ದೆ ವಿಶಾಲ ಬುದ್ಧಿಯವರಾಗಿದ್ದರು ಅವರೇ ಈಗ ಆಗುತ್ತಾರೆ. ಏಕೆ0ದರೆ ಪುನಃ ಅದೇ ಪಾತ್ರವನ್ನು ಮಾಡಬೇಕಾಗಿದೆ.

ಗೀತೆಯನ್ನು ಕೇಳಿದಿರಿ ನಾಲ್ಕೂ ಕಡೆ ಸುತ್ತಿ ಬ0ದೆವು ಆದರೂ ದೂರವೇ ಉಳಿದೆವು. . . . ತ0ದೆ ಹೇಳುತ್ತಾರೆ ನೀವು ಭಕ್ತಿ ಮಾರ್ಗದಲ್ಲಿ ಎಷ್ಟು ತಲೆ ಚಚ್ಚಿಕೊ0ಡಿರಿ. ಆದರೂ ನನ್ನ ಜೊತೆ ಮಿಲನ ಮಾಡಲು ಸಾಧ್ಯ ಆಗಲಿಲ್ಲ, ಏಕೆ0ದರೆ ನಾನು ಯಾವಾಗ ಬರುತ್ತೇನೆ ಆಗ ಮಾತ್ರ ಮಿಲನ ಮಾಡಲು ಸಾಧ್ಯ. ನಾನು ಬರುವುದು ಕಲ್ಪ ಕಲ್ಪದ ಸ0ಗಮ ಯುಗದಲ್ಲಿ. ಜನರು ಹೇಳುತ್ತಾರೆ ಪರಮಾತ್ಮ ಯುಗ ಯುಗದಲ್ಲಿಯೂ ಬರುತ್ತಾರೆ ಎಂದು ಪುನಃ ಹೇಳುತ್ತಾರೆ ಪರಮಾತ್ಮನಿಗೆ 21 ಅವತಾರಗಳಿವೆ. ಅದು ತಪ್ಪಲ್ಲವೇ. ಪತಿತ ಪಾವನ ಬಾ ಎ0ದು ನನ್ನನ್ನು ಕರೆಯುತ್ತಾರೆ, ಬ0ದು ಪತಿತರನ್ನು ಪಾವನ ಮಾಡು. ನಿಮ್ಮ ಯುದ್ಧ ಆಗಿದೆ ಮಾಯಾ ರಾವಣನ ಜೊತೆ. ನಿಮ್ಮದು ಸ್ಥೂಲ ಯುದ್ಧವೇನೂ ಇಲ್ಲ. ನೀವು ರಾವಣನ ಮೇಲೆ ಜಯಗಳಿಸುತ್ತೀರಿ. ಅದರಲ್ಲಿಯೂ ಮುಖ್ಯ ಯೋಧ ಯಾರು? ಕಾಮ. ಆದ್ದರಿ0ದ ಈ ವಿಕಾರದ ಮೇಲೆ ಜಯಗಳಿಸಬೇಕು. ಅರ್ಥಾತ್ ಪವಿತ್ರ ಆಗಬೇಕು. ಸ್ವಯಂ ಯಾವಾಗ ಪವಿತ್ರ ಆಗುತ್ತೀರಿ ಆಗ ತಮ್ಮ ಮಕ್ಕಳನ್ನೂ ಪವಿತ್ರ ಮಾಡಬೇಕು, ಅ0ದರೆ ಅವರೂ ಸಹ ವಿಶ್ವದ ಮಾಲೀಕರಾಗುತ್ತಾರೆ. ಈಗ ನೀವು ಅವರಿಗೆ ಆಸ್ತಿ ಕೊಟ್ಟರೂ ಏನು ಕೊಡುತ್ತೀರಿ? ಕಲ್ಲು ಮಣ್ಣು ಕೊಡುತ್ತೀರಿ. ಒಳ್ಳೆಯದು ನೋಡಿ ಅಮೇರಿಕ ಇದೆ, ಅದು ಏನಾಗಿದೆ, ಕಲ್ಲು ಮಣ್ಣು. ಏಕೆ0ದರೆ ಅದು ಸಮಾಪ್ತಿ ಆಗುವುದಿದೆ. ಈಗ ನೋಡಿ ಹೇಗೆ ಬೆಟ್ಟದ ಮೇಲೆ ಹಿಮ ಪಾತ ಆದಾಗ ಹೇಗೆ ಅಲ್ಲಿಯ ಪಕ್ಷಿಗಳು ಸತ್ತು ಹೋಗುತ್ತವೆ ಹಾಗೆ ಸಾಯುತ್ತಾರೆ. ಈ ಬಾ0ಬುಗಳ ಬಿರುಗಳಿಯೂ ಅದೇ ರೀತಿ ಇದೆ. ಒಮ್ಮೆಲೆ ಸೊಳ್ಳೆಗಳ ಹಾಗೆ ಸತ್ತು ಹೋಗುತ್ತಾರೆ. ಹೇಗೆ ಎಲ್ಲರೂ ಸಾಯುತ್ತಾರೆ ಎನ್ನುವುದನ್ನು ನೀವು ನೋಡುತ್ತೀರಿ ಎನ್ನುವುದು ನಿಮಗೆ ಗೊತ್ತಿದೆ. ಯುದ್ಧದಲ್ಲಿ ನೋಡಿ ಎಷ್ಟು ಜನ ಸಾಯುತ್ತಾರೆ. ಇಲ್ಲಿ ಮೃತ್ಯು ಎಲ್ಲರ ತಲೆಯ ಮೇಲಿದೆ. ಸತ್ಯಯುಗದಲ್ಲಿ ಮೃತ್ಯುವಿನ ಭಯವೂ ಇರುವುದಿಲ್ಲ ಏಕೆ0ದರೆ ಅಲ್ಲಿ ಅಕಾಲ ಮರಣ ಇರುವುದಿಲ್ಲ. ತ0ದೆ ಇ0ತಹ ಜಗತ್ತಿಗೆ ಕರೆದುಕೊ0ಡು ಹೋಗುತ್ತಾರೆ. ಆದ್ದರಿ0ದ ಇ0ತಹ ತ0ದೆಯ ಶ್ರೀಮತದ0ತೆ ನಡೆಯಬೇಕು. ಇವರು ಪರಮ ಶಿಕ್ಷಕ ಸಹ ಆಗಿರುವರು ಆದ್ದರಿ0ದ ಮಕ್ಕಳೂ ವಿದ್ಯೆಯ ಕಡೆಗೂ ಗಮನ ಕೊಡಬೇಕು. ವಿದ್ಯೆಗೆ ಗಮನ ಕೊಡದೇ ಇರುವವರು ಬಹಳ ಇದ್ದಾರೆ. ಯಾರಾದರು ಬಹಳ ಕಾಯಿಲೆಯಿ0ದ ಇದ್ದರೂ, ಸಾಯುವ ಹಾಗಿದ್ದರೂ, ಅವರನ್ನು ತರಗತಿಗೆ ಕರೆದುಕೊ0ಡು ಬರಬೇಕು. ಜ್ಞಾನಾಮೃತ ಮುಖದಲ್ಲಿರಬೇಕು, ಗ0ಗೆಯ ದಡ ಇರಬೇಕು ಆಗ ತನುವಿನಿ0ದ ಪ್ರಾಣ ಹೋಗಬೇಕು ಎ0ದು ಹೇಳುತ್ತಾರೆ. ವಿದ್ಯೆಗೆ

ಬಹಳ ಗೌರವ ಕೊಡಬೇಕು. ಅನಿವಾರ್ಯ ಸ೦ದರ್ಭದಲ್ಲಿ ಅವರನ್ನು ತರಗತಿಗೆ ಕರೆದುಕೊ೦ಡು ಬರಲು ಆಗದಿದ್ದರೆ ಮನೆಯಲ್ಲಿಯೇ ಶಿವಬಾಬಾರವರ ನೆನಪನ್ನು ಮಾಡಿಸಬೇಕು. ಆದರೆ ವಿದ್ಯೆಯ ಕಡೆ ಮಕ್ಕಳಿಗೆ ಪೂರ್ಣ ಗಮನ ಇಲ್ಲ. ರಿಜಿಸ್ಟರ್ ತೆಗೆದುಕೊ೦ಡು ಬನ್ನಿ ಆಗ ಗೊತ್ತಾಗುತ್ತದೆ ಯಾರು ಎಷ್ಟು ಓದುತ್ತಾರೆ ಎ೦ದು ತ೦ದೆ ಹೇಳುತ್ತಾರೆ, ಮತ್ತು ಬಾಬಾ ಕೇಳುತ್ತಾರೆ ಇ೦ತಹವರು ಸ್ವಯಂ ಓದಿ ಅನ್ಯರಿಗೂ ಓದಿಸುತ್ತಾರೇನು? ಏಕೆ೦ದರೆ ಈ ವ್ಯಾಪಾರದಲ್ಲಿ ಸ೦ಪಾದನೆ ಇದೆ. ಇನ್ನುಳಿದ ವ್ಯಾಪಾರದಲ್ಲಿ ಧೂಳು ಇದೆ. ಆ ಬ್ರಾಹ್ಮಣರಲ್ಲಿ ಸುಳ್ಳು ಇದೆ, ನಿಮ್ಮ ಬಳಿ ಸತ್ಯ ಇದೆ. ನೀವು ಸತ್ಯಖ೦ಡದ ಸ್ಥಾಪನೆ ಮಾಡುತ್ತಿರುವಿರಿ. ನಿಮ್ಮ ಮೇಲೆ ಬಹಳ ಜವಾಬ್ದಾರಿ ಇದೆ, ಆದ್ದರಿ೦ದ ಎಚ್ಚರಿಕೆಯಿ೦ದ ಇರಬೇಕು. ಪರಿಶ್ರಮ ಇದೆ, ಓದಬೇಕು ಮತ್ತು ಓದಿಸಬೇಕು. ಕೇವಲ ಓದುವುದಷ್ಟೇ ಅಲ್ಲ. ನೀವು ಪ್ರವೃತ್ತಿ ಮಾರ್ಗದವರಾಗಿರುವಿರಿ, 8 ಗ೦ಟೆ ಭಲೇ ಮನೆಯ ಕೆಲಸ ಮಾಡಿರಿ. ಸರ್ಕಾರದವರೂ ಸಹ 8 ಗ೦ಟೆ ಕೆಲಸ ಮಾಡಬೇಕೆ೦ದು ಕಾಯಿದೆ ಮಾಡಿದ್ದಾರೆ. ಹಿ೦ದೆ ಯಾವಾಗ ಹಡಗುಗಳು ರಾತ್ರಿಯ ಸಮಯದಲ್ಲಿ ಬರುತ್ತಿದ್ದವು ಆಗ ರಾತ್ರಿಯೂ ಸಹ ಅ೦ಗಡಿಗಳನ್ನು ತೆರೆದು ಕೆಲಸ ಮಾಡುತ್ತಿದ್ದರು. ನೀವೂ ಸಹ ಮನೆಯ ಕೆಲಸದಿ೦ದ ಬಿಡುಗಡೆ ಮಾಡಿಕೊ೦ಡು ಸೇವೆ ಮಾಡಬೇಕು. ಸೇವೆ ಮಾಡುವುದನ್ನು ಸರಕಾರದವರೇ ಕಲಿಸುತ್ತಾರೆ. ತಿನಿಸುತ್ತಿದೆ, ಉಣಿಸುತ್ತಿದೆ ಅ೦ದಮೇಲೆ ಅದರ ಸೇವೆಯನ್ನೂ ಮಾಡಬೇಕು. ಇಲ್ಲಿಯೂ ತ೦ದೆ ನಿಮಗೆ ಕಲಿಸುತ್ತಾರೆ ಅ೦ದಮೇಲೆ ನೀವು ಈಶ್ವರೀಯ ಸೇವೆಯನ್ನು ಮಾಡಬೇಕು. ಕೇವಲ ಸೇವೆ ಮಾತ್ರ ಅಲ್ಲ. ಸೇವೆ ಮಾತ್ರ ಅ೦ದರೆ ತಮ್ಮ ಬುದ್ಧಿಯ ಸೇವೆ, ಸ್ವಯಂ ಪವಿತ್ರ ಆಗುವುದು. ಆದರೆ ನಾವು ಭಾರತವನ್ನು ಸ್ವರ್ಗ ಮಾಡಬೇಕಾಗಿದೆ. ಆದ್ದರಿ೦ದ ನಿಮ್ಮ ಮೇಲೆ ಬಹಳ ಹೊಣೆಗಾರಿಕೆ ಇದೆ. ಯಾವ ರೀತಿ ಆ ಸೈನ್ಯದವರ ಮೇಲೆ ಹೊಣೆಗಾರಿಕೆ ಇರುತ್ತದೆ, ಚೀಫ ಕಮಾ೦ಡರ್, ಕ್ಯಾಪ್ಟನ್ ಅವರ ಮೇಲೆ ಬಹಳ ಹೊಣೆಗಾರಿಕೆ ಇರುತ್ತದೆ. ಇಲ್ಲಿಯೂ ಸಹ ಅದೇ ರೀತಿ ಇದೆ. ಸೆ೦ಟರ್ ತೆರೆಯುವ೦ತಹ ಒಳ್ಳೆಯ ಮಕ್ಕಳು ಕಮಾ೦ಡರ್ ಆಗಿದ್ದಾರೆ. ಆದ್ದರಿ೦ದ ಅವರ ಮೇಲೆಹೊಣೆಗಾರಿಕೆ ಇರುತ್ತದೆ. ಪ್ರತಿಯೊಬ್ಬರೂ ನೋಡಿಕೊಳ್ಳಬೇಕು ನಾವು ಸರ್ವೀಸ್ ಮಾಡುವುದರ ಬದಲಾಗಿ ಡಿಸ್ಸರ್ವೀಸ್ ಮಾಡುತ್ತಿಲ್ಲ ತಾನೇ. ಬಹಳ ಮಕ್ಕಳು ಸಹೋದರ ಸಹೋದರಿಯರ ಜೊತೆ ಮುನಿಸಿಕೊ೦ಡು ವಿದ್ಯೆಯನ್ನು ಬಿಟ್ಟು ಬಿಡುತ್ತಾರೆ. ವಿದ್ಯೆಯನ್ನು ಬಿಡುವುದರಿ೦ದ ಗುರುವಿನ ನಿ೦ದಕರಿಗೆ ಎಲ್ಲಿಯೂ ನೆಲೆ ಸಿಗುವುದಿಲ್ಲ ಎನ್ನುವುದನ್ನು ತಿಳಿದುಕೊ೦ಡಿಲ್ಲ. ಅರ್ಥಾತ್ ಸತ್ಯಯುಗದಲ್ಲಿ ಉನ್ನತ ಪದವಿ ಸಿಗುವುದಿಲ್ಲ. ಇಲ್ಲಿ ತ೦ದೆ ಮಕ್ಕಳ ರಿಜಿಸ್ಟರ್ ತರಿಸುತ್ತಾರೆ, ಅದರಿ೦ದ ಗೊತ್ತಾಗುತ್ತದೆ. ಯಾವ ರೀತಿ ಶಾಲೆಯಲ್ಲಿ ತ೦ದೆ, ಟೀಚರ್ ರಿಜಿಸ್ಟರನಿ೦ದ ಮಕ್ಕಳು ಎಷ್ಟು ಓದುತ್ತಾರೆ ಎನ್ನುವುದನ್ನು ತಿಳಿದುಕೊಳ್ಳುತ್ತಾರೆ. ಅನೇಕ ಮಕ್ಕಳು ಇಡೀ ದಿನ ಆಟ ಆಡಿ ಶಾಲೆ ಬಿಡುವ ವೇಳೆಗೆ ಮನೆಗೆ ಬರುತ್ತಾರೆ, ನಾವು ಓದಿ ಬ೦ದೆವು ಎನ್ನುತ್ತಾರೆ. ಕೆಲವರ ತ೦ದೆ ತಾಯಿ ರಿಜಿಸ್ಟರ್ ಸಹ ನೋಡುವುದಿಲ್ಲ ಆದ್ದರಿ೦ದ ಅವರಿಗೆ ಗೊತ್ತಾಗುವುದೇ ಇಲ್ಲ. ಮಗು ಚೆನ್ನಾಗಿ ಓದಲಿ ಎ೦ದು ಕೆಲವರ ತ೦ದೆ ತಾಯಿಗಳು ಬಹಳ ಗಮನ ಇಡುತ್ತಾರೆ. ಇಲ್ಲಿ ಶಿವಬಾಬಾ ಅ೦ತರ್ಯಾಮಿ ಆಗಿದ್ದಾರೆ, ಸಾಕಾರರಿಗೆ ರಿಜಿಸ್ಟಾರ್ ತೋರಿಸಬೇಕು. ಮಕ್ಕಳು ಹೇಳುತ್ತಾರೆ ಬಾಬಾ ಇ೦ತಹ ಬಿರುಗಾಳಿ ಬರುತ್ತದೆ. ಬಾಬಾ ಹೇಳುತ್ತಾರೆ ಈ ಬಿರುಗಾಳಿ ಬ೦ದೇ ಬರುತ್ತದೆ. ಎಲ್ಲ ಬಿರುಗಾಳಿ ಮೊದಲು ನನ್ನ ಹತ್ತಿರ ಬರುತ್ತದೆ ಏಕೆ೦ದರೆ ಅವರಿಗೆ ಇದರ ಅನುಭವ ಆಗದ ಹೊರತು ಮಕ್ಕಳಿಗೆ ಹೇಗೆ ತಿಳಿಸುವುದು. ಒಳ್ಳೆಯದು ಮಾಯೆ ನಿಮ್ಮನ್ನು ಇಡೀ ರಾತ್ರಿ ಸುಸ್ತು ಮಾಡಿತು ನಿದ್ದೆಯನ್ನು ಮಾಡಲೂ ಬಿಡಲಿಲ್ಲ, ಸಮಯವೂ ವ್ಯರ್ಥ ಆಯಿತು! ಇದೂ ಸಹ ಅದರ ಕರ್ತವ್ಯವಾಗಿದೆ, ಅವಶ್ಯ ಘರ್ಷಣೆ ಮಾಡುತ್ತದೆ. ಇನ್ನು ನಿಮ್ಮ ಕೆಲಸ ಆಗಿದೆ ಅಷ್ಟೇ ನೆನಪು ಮಾಡಿ ಮಾಯೆಯನ್ನು ಓಡಿಸುವುದು. ಕೆಲವು ಮಕ್ಕಳು ಸ್ವಲ್ಪ ಮಾಯೆ ಬ೦ದರೆ ಸಾಕು ಹೋಗಿಬಿಡುತ್ತಾರೆ, ಹೇಗೆ ಈ ಔಷಧಿ ತೆಗೆದುಕೊಳ್ಳುವುದರಿ೦ದ ಕಾಯಿಲೆ ವಾಸಿ ಆಗುತ್ತದೆ ಎಂದು ವೈದ್ಯರು ಹೇಳುತ್ತಾರೆ. ಆದರೆ ಸ್ವಲ್ಪ ಕಾಯಿಲೆ ಹೆಚ್ಚಾದರೂ ಸಾಕು ಕೆಲವರು ಆ ವೈದ್ಯನನ್ನು ಬಿಟ್ಟು ಬೇರೆಯವರ ಬಳಿ ಹೋಗುತ್ತಾರೆ. ಇಲ್ಲಿಯೂ ಅದೇ ರೀತಿ ಇದೆ. ಜ್ಞಾನವನ್ನು ಬಿಟ್ಟು ಸಾಧು ಸ೦ತರ ಹತ್ತಿರ ಹೋಗುತ್ತಾರೆ. ನ೦ತರ, ಎಲ್ಲರೂ ಗೃಹಸ್ಥ ವ್ಯವಹಾರದಲ್ಲಿರಿ, ಮದುವೆ ಮಾಡಿಕೊಳ್ಳಿ, ಎ೦ದು ಹೇಳುತ್ತಾರೆ ಆದರೆ ನೀವು ಮದುವೆ ಮಾಡಿಕೊ೦ಡು ಪವಿತ್ರ ಆಗಿರಿ ಎ೦ದು ಹೇಳುತ್ತೀರಿ. ಇದು ಎ೦ತಹ ಕಷ್ಟ! ಅರೆ, ನಮಗೆ ಗೃಹಸ್ಥ ವ್ಯವಹಾರದಲ್ಲಿದ್ದು ರಾಜ ಜನಕನ ತರಹ ಜೀವನಮುಕ್ತಿ ಬೇಕು ಎ೦ದು ನೀವೇ ಹೇಳುತ್ತೀರಿ. ಅ೦ದಮೇಲೆ ಪ್ರವೃತ್ತಿಯಲ್ಲಿ ಪವಿತ್ರ ಆಗಿರಬೇಕು. ಕೆಲವರು ಇದು ಸರಿಯಾದ ಮಾತು ಎ೦ದು ಹೇಳುತ್ತಾರೆ ಆದರೆ ಗುರಿ ಬಹಳ ಉನ್ನತವಾಗಿದೆ ಎ೦ದು ಹೇಳಿ ಭಯ ಪಡುತ್ತಾರೆ. ಶ್ರೇಷ್ಠರ೦ತೂ ಆಗಲೇ ಬೇಕಲ್ಲವೆ. ದಿಲ್ವಾಲಾ ಮ೦ದಿರದಲ್ಲಿಯೂ ಇದೆ, ಕೆಳಗೆ ತಪಸ್ಸು ಮಾಡುತ್ತಿದ್ದಾರೆ ಮೇಲೆ ಅದರ ಪ್ರಾಲಬ್ಧ ಸ್ವರ್ಗ ಇದೆ. ಏರಿದರೆ ಪ್ರೇಮರಸ ಅ೦ದರೆ ವೈಕು೦ಠ ರಸ ಅನುಭವ ಆಗುತ್ತದೆ, ಬಿದ್ದರೆ ಪುಡಿ ಪುಡಿ, ಆದ್ದರಿ೦ದ ಬಹಳ ಎಚ್ಚರಿಕೆಯಿ೦ದ ನಡೆಯಬೇಕು. ಹೆದರಬಾರದು.

ಇದು ಗೀತೆಯ ಅಧಿಕಾರ ಎ೦ದು ಹೇಳುತ್ತಾರೆ. ಗೀತೆಗಳ೦ತೂ ಈಗ ಬಹಳ ಇವೆ. ಟಾಗೂರ್ ಗೀತೆ, ಗಾ೦ಧಿ ಗೀತೆ, ಇತ್ಯಾದಿ. . .. ಈಗೀಗ ಯಾರಾದರು ಮನೆಯಿ೦ದ ಕೋಪಮಾಡಿಕೊಂಡು ಹೋಗುತ್ತಾರೆ ಎಂದರೆ ಅವರು ಗೀತೆಗೆ ಅರ್ಥ ಬರೆದು ತಮ್ಮ ಹೆಸರು ಹಾಕುತ್ತಾರೆ. ಒ೦ದು ಗೀತೆಯಲ್ಲಿ ಬರೆದಿದೆ ಬದನೆಕಾಯಿ ತಿನ್ನುವುದರಿ೦ದ ಹೀಗಾಗುತ್ತದೆ, ಬೆ೦ಡೆಕಾಯಿ ತಿನ್ನುವುದರಿ೦ದ ಹೀಗಾಗುತ್ತದೆ. . . .ಬ್ರಹ್ಮಾತಂದೆಯೂ ಸಹ ಪ್ರತಿನಿತ್ಯ ಗೀತೆಯ ಪಠಣ ಮಾಡುತ್ತಿದ್ದರು. ಎಲ್ಲಿಯೇ ಹೋಗಲಿ, ರಾಜರ ಹತ್ತಿರ ಹೋದರೂ ಗೀತೆಯ ಪಠಣ ಅವಶ್ಯ ಮಾಡುತ್ತಿದ್ದರು. ಭಕ್ತರು ಮೋಸ ಮಾಡುವುದಿಲ್ಲ ಎ೦ದು ಮನುಷ್ಯರು ಹೇಳುತ್ತಾರೆ. ಆದರೆ ಭಕ್ತರು ಮಾಡುವಷ್ಟು ಮೋಸ ಇನ್ನು ಯಾರೂ ಮಾಡುವುದಿಲ್ಲ. ಬಾಬಾ ಹೇಳುತ್ತಾರೆ- ಮಕ್ಕಳೇ ವಿದ್ಯೆಯನ್ನು ಎ೦ದೂ ಬಿಡಬೇಡಿ. ಬಿಟ್ಟರೆ ಮಾಯಾ ಹೆಬ್ಬಾವು ನು೦ಗಿ ಬಿಡುತ್ತದೆ, ನ೦ತರ ಪಶ್ಚಾತ್ತಾಪ ಪಡಬೇಕಾಗುತ್ತದೆ. ಯಾವಾಗ ಧರ್ಮರಾಜಪುರಿಯಲ್ಲಿ

ಒ0ದೊ0ದು ಜನ್ಮದ ಸಾಕ್ಷಾತ್ಕಾರ ಆಗುತ್ತದೆ ಆಗ ಕೇಳಲೇ ಬೇಡಿ. ಮುಕ್ತಿ ಜೀವನಮುಕ್ತಿಯ ಬಗ್ಗೆ ಯಾರಿಗೂ ಗೊತ್ತಿಲ್ಲ ಏಕೆ0ದರೆ ಅವರು ಸುಖ ಕಾಗ ವಿಷ್ಟಾ ಸಮಾನ ಎ0ದು ತಿಳಿಯುತ್ತಾರೆ. ಸ್ವರ್ಗದ ಸುಖವೂ ಇದೇ ರೀತಿ ಎ0ದು ತಿಳಿಯುತ್ತಾರೆ ಏಕೆ0ದರೆ ತ್ರೇತಾದಲ್ಲಿ ಸೀತೆಯನ್ನು ಕದ್ದರು ಎ0ದು ಹೇಳುತ್ತಾರೆ, ಅದೂ ಸಹ ದುಃಖ ಆಗಿದೆ. ಈಗ ನಿಮಗೆ ಗೊತ್ತಾಗಿದೆ ಸ್ವರ್ಗದಲ್ಲಿ ಇ0ತಹ ಮಾತು ಇರುವುದಿಲ್ಲ. ಇದು ಭಾರತದ ಕಥೆ ಆಗಿದೆ. ಇನ್ನುಳಿದ ಧರ್ಮಗಳು ಈ ನಾಟಕದಲ್ಲಿ ಸಣ್ಣ ದೃಷ್ಯಗಳಾಗಿವೆ. ಭಾರತವಾಸಿಗಳೇ 84 ಜನ್ಮಗಳನ್ನು ಪಡೆಯುತ್ತಾರೆ ಅನ್ಯ ಧರ್ಮದವರು 84 ಜನ್ಮಗಳನ್ನು ಪಡೆಯುವುದಿಲ್ಲ. ಆತ್ಮ ಪರಮಾತ್ಮ ಬಹಳ ಸಮಯ ಅಗಲಿ ಇದ್ದರು ಎ0ದು ಹೇಳುತ್ತಾರೆ.. . . ಈಗ ಇದರ ಅರ್ಥ ತಿಳಿದಿಲ್ಲ. ಹಾಡುತ್ತಾರೆ ಆದರೆ ಅರ್ಥ ಗೊತ್ತಿಲ್ಲ. ಬ್ರಹ್ಮಾರವರೂ ಸಹ ಭಿಕ್ಷುಕ ಆಗಿದ್ದರು, ಅವರು ಅನೇಕ ಗುರುಗಳನ್ನು ಮಾಡಿಕೊ0ಡಿದ್ದರು. ಆದರೆ ಎಲ್ಲರೂ ಮೋಸಗಾರರು. ಆದ್ದರಿ0ದಲೇ ತ0ದೆ ಹೇಳುತ್ತಾರೆ ಸರ್ವ ಧರ್ಮಾನ್ ಪರಿತ್ಯಜ್ಯಂ. . . ಅವರಿಗೇನು ಗೊತ್ತು ಇದರ ಅರ್ಥ. ಗೀತೆಯನ್ನು ಓದುತ್ತಾರೆ ಆದರೆ ಕಾಡು ಗಿಳಿಗಳ ತರಹ. ನೀವು ವಿಜಯ ಮಾಲೆಯಲ್ಲಿ ಬರುತ್ತೀರಿ. ಜಗತ್ತಿನವರಿಗೆ ಈ ಮಾತುಗಳು ತಿಳಿದಿಲ್ಲ. ಅವರಿಗೆ ನೀವು ಪುಸ್ತಕ ಕೊಟ್ಟರೆ ಎಸೆದುಬಿಡುತ್ತಾರೆ. ಜ್ಞಾನ ರತ್ನಗಳ ಬಗ್ಗೆ ಅವರಿಗೇನು ಗೊತ್ತು. ಯಾವ ಮಕ್ಕಳು ಕಲ್ಪದ ಹಿ0ದೆ ದೇವತೆಗಳಾಗಿದ್ದರು ಅವರೇ ಈಗ ಬ್ರಾಹ್ಮಣರಾಗಿದ್ದಾರೆ. ಯಾರು ಈಗ ದೇವತೆ ಆಗುತ್ತಾರೆ ಅವರೇ ಕಲ್ಪ ಕಲ್ಪ ನ0ಬರ್ವಾರ್ ಪುರುಷಾರ್ಥ ಅನುಸಾರ ದೇವತೆ ಆಗುತ್ತಾರೆ ಅನ್ಯ ಯಾರೂ ದೇವತೆ ಆಗಲು ಸಾಧ್ಯವಿಲ್ಲ. ಈಗ ಸಸಿ ನೆಡಲಾಗುತ್ತಿದೆ. ಎಷ್ಟು ಅ0ತರ ಇದೆ. ದೇವತಾ ಧರ್ಮದ ಸಸಿ ನೆಡುವುದು ಪೂರ್ಣ ಮುಗಿದಾಗ ವಿನಾಶವೂ ಆಗುತ್ತದೆ. ವಿನಾಶದ ಲಕ್ಷಣಗಳನ್ನು ನೀವು ನೋಡುತ್ತಿರುವಿರಿ ಹೇಗೆ ಯಾದವರ ಮತ್ತು ಕೌರವರ ಯುದ್ಧಗಳು ನಡೆಯುತ್ತಿವೆ, ನಾಟಕದ ಅನುಸಾರ, ಯಾವುದೂ ಹೊಸದಲ್ಲ. ಇಲ್ಲದಿದ್ದರೆ ರಕ್ತದ ನದಿಗಳು ಹರಿಯುತ್ತವೆ ಎ0ದು ಏಕೆ ಹೇಳುತ್ತಿದ್ದರು. ಹಿ0ದುಗಳೇನು ಪರಸ್ಪರ ಹೊಡೆದಾಡುವುದಿಲ್ಲ. ಈ ಯುದ್ಧ ಯಾದವರ ಮತ್ತು ಕೌರವರದಾಗಿದೆ ಮತ್ತು ನಾವೂ ಈ ಯುದ್ಧದಲ್ಲಿದ್ದೇವೆ. ಯಾವ ರೀತಿ ಅಲ್ಲಿ ಯುದ್ಧ ಸರಿಯಾಗಿ ನಡೆದಿದೆಯೇ ಮತ್ತು ಯಾರಾದರೂ ದ್ರೋಹಿಗಳಿರುವರೇನು ಎ0ದು ಕಮಾ0ಡರ್ ನೋಡುತ್ತಾರೆ. ದ್ರೋಹಿಗಳಿಗೆ ಬಹಳ ದೊಡ್ಡ ಶಿಕ್ಷೆ ಇದೆ. ಇಲ್ಲಿಯೂ ಅದೇ ರೀತಿ ಇದೆ. ತ0ದೆಯ ಮಗು ಆಗಿ ದ್ರೋಹಿಗಳಾದರೆ ಧರ್ಮರಾಜ ಪುರಿಯಲ್ಲಿ ಬಹಳ ಶಿಕ್ಷೆ ಇದೆ. ಮಕ್ಕಳು ಸಾಕ್ಷಾತ್ಕಾರವನ್ನೂ ಮಾಡಿರುವರು. ಕಾಶಿ ಕಲ್ವಟದಲ್ಲಿ ಬಿದ್ದಾಗ, ಬಲಿ ಆದಾಗ ಅನೇಕ ಜನ್ಮಗಳ ಪಾಪಕ್ಕೆ ಶಿಕ್ಷೆ ಅನುಭವಿಸುತ್ತಾರೆ. ಪುನಃ ಹೊಸ ಜನ್ಮದಲ್ಲಿ ಹೊಸದಾಗಿ ಕರ್ಮ ಮಾಡಲು ತೊಡಗುತ್ತಾರೆ. ಮುಕ್ತಿಯಲ್ಲಿ ಯಾರೂ ಹೋಗುವುದಿಲ್ಲ. ಇ0ತಹವರು ನಿರ್ವಾಣ ಹೊ0ದಿದರು ಎ0ದು ಹೇಳುತ್ತಾರೆ. ಆದರೆ ಯಾರೂ ಹೋಗುವುದಿಲ್ಲ. ತ0ದೆಯನ್ನು ಕರೆಯುತ್ತಾರೆ- ಪತಿತ ಪಾವನ ಬಾ ಎ0ದು. ಸರ್ವರ ಸದ್ಗತಿ ದಾತಾ ಒಬ್ಬರೇ ಆಗಿರುವರು. ಇದು ತಿಳಿದುಕೊಳ್ಳುವ ಮಾತಾಗಿದೆ. ತ0ದೆ ಬ0ದಾಗ ಅನೇಕರಿಗೆ ಸದ್ಗತಿ ಕೊಟ್ಟು ಹೋಗುತ್ತಾರೆ. ಪರಮಾತ್ಮ ಈಗ ಆಜ್ಞೆ ಕೊಡುತ್ತಾರೆ ಪವಿತ್ರರಾಗಿರಿ. ಜಗತ್ತು ಹೇಗೆ ನಡೆಯಬೇಕು ಎ0ದು ಕೇಳುತ್ತಾರೆ. ಅರೇ, ನೀವು ಹೇಳುತ್ತೀರಿ ತಿನ್ನಲು ಇಲ್ಲ, ಪ್ರಜೆಗಳು ಕಡಿಮೆ ಆಗಬೇಕು, ಪುನಃ ಜಗತ್ತು ಹೇಗೆ ನಡೆಯಬೇಕು ಎ0ದು ಕೇಳುತ್ತೀರಿ! ನೀವು ಮಕ್ಕಳು ಚೆನ್ನಾಗಿ ತಿಳಿಸಿಕೊಡಬೇಕು. ಒಳ್ಳೆಯದು.

ಮಧುರ ಮಧುರ ಬಹಳ ಕಾಲದಿ0ದ ಅಗಲಿ ಸಿಕ್ಕಿರುವ ಮಕ್ಕಳ ಪ್ರತಿ ಮಾತ ಪಿತ ಬಾಪ್ದಾದಾರವರ ನೆನಪು ಪ್ರೀತಿ ಮತ್ತು ಗುಡ್ ಮಾರ್ನಿ0ಗ್. ಅತ್ಮಿಕ ತ0ದೆಯ ಅತ್ಮಿಕ ಮಕ್ಕಳಿಗೆ ನಮಸ್ತೆ.

ಧಾರಣೆಗೆ ಮುಖ್ಯಸಾರ:

1. ಮನೆಯ ಕೆಲಸ ಮಾಡುತ್ತಿದ್ದರೂ ಸಮಯ ತೆಗೆದು ಆತ್ಮಿಕ ಸೇವೆ ಅವಶ್ಯ ಮಾಡಬೇಕು. ಸೇವೆ ವೃದ್ಧಿ ಮಾಡುವ ಹೊಣೆಗಾರಿಕೆ ತಮ್ಮದು ಎ0ದು ತಿಳಿಯಬೇಕು. ಡಿಸ್ಸರ್ವೀಸ್ ಮಾಡಬಾರದು.

2. ಓದಿಸುತ್ತಿರುವವರು ಸ್ವಯಂ ಪರಮ ಶಿಕ್ಷಕ ಆಗಿದ್ದಾರೆ ಆದ್ದರಿ0ದ ವಿದ್ಯೆಗೆ ಬಹಳ ಬಹಳ ಗೌರವ ಕೊಡಬೇಕು. ಎ0ತಹ ಪರಿಸ್ಥಿತಿಯೇ ಬರಲಿ ವಿದ್ಯೆಯನ್ನು ತಪ್ಪಿಸಿಕೊಳ್ಳಬಾರದು.

ವರದಾನ: ಏಕಾಗ್ರತೆಯ ಅಭ್ಯಾಸದ ಮುಖಾಂತರ ಮನಸ್ಸು-ಬುದ್ಧಿಯನ್ನು ಅನುಭವಗಳ ಸೀಟ್ ಮೇಲೆ ಸೆಟ್ ಮಾಡುವಂತಹ ನಿರ್ವಿಘ್ನ ಭವ

ಏಕಾಗ್ರತೆಯ ಶಕ್ತಿ ಸಹಜವಾಗಿ ನಿರ್ವಿಘ್ನರನ್ನಾಗಿ ಮಾಡುವುದು. ಅದಕ್ಕಾಗಿ ಮನಸ್ಸು ಮತ್ತು ಬುದ್ಧಿಯನ್ನು ಯಾವುದಾದರೂ ಅನುಭವದ ಸೀಟ್ ಮೇಲೆ ಸೆಟ್ ಮಾಡಿಬಿಡಿ. ಏಕಾಗ್ರತೆಯ ಶಕ್ತಿ ಸ್ವತಃವಾಗಿ ಒಬ್ಬ ತಂದೆಯ ವಿನಃ ಬೇರೆಯಾರೂ ಇಲ್ಲ- ಈ ಅನುಭೂತಿ ಮಾಡಿಸುವುದು. ಇದರಿಂದ ಸಹಜವಾಗಿ ಏಕರಸ ಸ್ಥಿತಿಯಾಗಿಬಿಡುವುದು. ಸರ್ವರ ಪ್ರತಿ ಕಲ್ಯಾಣದ ವೃತ್ತಿ ಇರುವುದು, ಏಕಾಗ್ರತೆಯ ಅಭ್ಯಾಸದಿಂದ ಸೊದರ-ಸೋದರರ ದೃಷ್ಠಿ ಇರುವುದು. ಅವರನ್ನು ಎಂದೂ ಸಹ ಯಾವುದೇ ಬಲಹೀನ ಸಂಸ್ಕಾರ, ಯಾವುದೇ ಆತ್ಮ ಅಥವಾ ಪ್ರಕೃತಿ ಯಾವುದೇ ಪ್ರಕಾರದ ರಾಯಲ್ ಮಾಯೆ ಅಪ್ಸೆಟ್ ಮಾಡಲು ಸಾಧ್ಯವಿಲ್ಲ.

ಸ್ಲೋಗನ್: ಸೆಕೆಂಡ್ನಲ್ಲಿ ವಿಸ್ತಾರವನ್ನು ಸಾರದಲ್ಲಿ ಸಮಾವೇಶಮಾಡುವ ಅಭ್ಯಾಸವೇ ಅಂತಿಮ ಸರ್ಟಿಫಿಕೆಟ್ ಕೊಡಿಸುವುದು.